ಬಾದಾಮಿ	:	32.50
ಕೆಂಗೇರಿ	:	65.00
ಹರಪ್ಪನಹಳ್ಳಿ	:	32.50

ಉ) ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ರಸ್ತೆಗಳ ಡಾಂಬರೀಕರಣದ ಕಾಮಗಾರಿಗಳು ಮಳೆಗಾಲದ ಪ್ರಯುಕ್ತ ನಿಧಾನವಾಗಿದ್ದು ಈಗ ಪ್ರಗತಿಯಲ್ಲಿದೆ.

ಊ) ಇಲ್ಲ.

ಋ) ಕಾಮಗಾರಿಗಳು ಪ್ರಗತಿಯಲ್ಲಿದ್ದು ಮುಂದಿನ 14 ವರ್ಷಗಳಲ್ಲಿ ಕಂತುಗಳಲ್ಲಿ ಸಾಲ ವಸೂಲಿ ಮಾಡಬೇಕಾಗುತ್ತದೆ.

ಬೆಂಗಳೂರು ನಗರದಲ್ಲಿ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 113(478)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಬೆಂಗಳೂರು ನಗರದಲ್ಲಿ ಸಂಚಾರ ಒತ್ತಡದಿಂದಾಗಿ ರೈಲ್ವೆ ಸೇತುವೆ ರಸ್ತೆಗಳನ್ನು ಅಗಲಗೊಳಿಸುವ ಕಾಮಗಾರಿ ನಡೆಯುತ್ತಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಯಾವ ಯಾವ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪೂರ್ಣಗೊಂಡಿರುವ ಕಾಮಗಾರಿಗಳಾವುವು?

ಇ) ನೆಹರು ನಗರ (ಶಿವಾನಂದ ವೃತ್ತದ ಬಳಿ)ದಲ್ಲಿರುವ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವ ಕಾಮಗಾರಿಯನ್ನು ಎಷ್ಟು ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಉತ್ತರ

ಅ) ಇಲ್ಲ. ಆದಾಗ್ಯೂ ರಸ್ತೆ ಮೇಲು ಸೇತುವೆ ನಿರ್ಮಾಣ ಹಾಗೂ ಕೆಳಸೇತುವೆ

ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.

ಆ) ಈಗ ಇರುವ ಲೆವೆಲ್ ಕ್ರಾಸಿಂಗ್‌ಗಳಿಗೆ ಬದಲಾಗಿ ಈ ಕೆಳಕಂಡ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು:

1. ಲಿಂಗರಾಜಪುರಂ
2. ಇಂಡಿಯಾ ಟೊಬ್ಯಾಕೊ ಫ್ಯಾಕ್ಟರಿ
3. ಬಾಣಸವಾಡಿ.

ಈ ಕೆಳಕಂಡ ಎರಡು ರೈಲ್ವೆ ಕೆಳ ಸೇತುವೆಗಳನ್ನು ಅಗಲಗೊಳಿಸಲಾಗುವುದು:

1. ಫ್ರೇಜರ್ ಟೌನ್ ಪೊಲೀಸ್ ಠಾಣೆ ಹತ್ತಿರ.
2. ನೆಹರೂ ವೃತ್ತದ ಹತ್ತಿರ.

ಇ) ಏಪ್ರಿಲ್ 2002ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದ ಅಂಗಡಿಗಳ ಸ್ಥಳಾಂತರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 115(480)

ಸದಸ್ಯರ ಹೆಸರು: ಶ್ರೀ ಪಿ.ಸಿ.ಮೋಹನ (ಚಿಕ್ಕಪೇಟೆ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

ಪ್ರಶ್ನೆ

ಅ) ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದಲ್ಲಿರುವ ಹೂವು ಹಣ್ಣು ತರಕಾರಿ ಮಾರುಕಟ್ಟೆ ಇತ್ಯಾದಿ ಅಂಗಡಿ ಹಾಗೂ ಬಂಬೂ ಬಜಾರ್ ಅನ್ನು ಬೇರೆಡೆಗೆ ಸ್ಥಳಾಂತರ ಮಾಡಲು ಸರ್ಕಾರ ತೀರ್ಮಾನಿಸಿದೆಯೇ? ಅದಕ್ಕೆ ಕಾರಣಗಳೇನು?

ಆ) ಸ್ಥಳಾಂತರಕ್ಕೆ ಸ್ಥಳೀಯ ಅಂಗಡಿಗಳ ಮಾಲೀಕರು ತಮ್ಮ ಒಪ್ಪಿಗೆ ನೀಡಿದ್ದಾರೆಯೇ?

ಇ) ಅವರಿಗೆ ಪರ್ಯಾಯ ಸ್ಥಳಗಳನ್ನು ಗುರುತಿಸಲಾಗಿದೆಯೇ? ಸ್ಥಳಾಂತರ ಪ್ರಕ್ರಿಯೆ ಯಾವ ಹಂತದಲ್ಲಿದೆ?